ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	816 (949)
ಸದಸ್ಯರ ಹೆಸರು	:	ಶ್ರೀ ಆರ್ ಪ್ರಸನ್ನ ಕುಮಾರ್ (ಸ್ಥಳಿಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	20.09.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಎಷ್ಟು ಚಿತ್ರಕಲಾ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ;(ವಿವರ ನೀಡುವುದು)	ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ಹಿಸುತ್ತಿರುವ ಚಿತ್ರಕಲಾ ಶಿಕ್ಷಕರ ಒಟ್ಟು ಸಂಖ್ಯೆ – 1139. ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ಹಿಸುತ್ತಿರುವ ಚಿತ್ರಕಲಾ ಗ್ರೇಡ್–2 ಶಿಕ್ಷಕರ ಒಟ್ಟು ಸಂಖ್ಯೆ–142.
ಆ	ಚಿತ್ರಕಲಾ ಶಿಕ್ಷಕರು ಇಲ್ಲದಿದ್ದಲ್ಲಿ ನೇಮಕಾತಿಗಾಗಿ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ಚಿತ್ರಕಲಾ ಶಿಕ್ಷಕರ ಒಟ್ಟು 339 ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಆರ್ಥಿಕ ಇಲಾಖೆಯು ಹೆಚ್ಚುವರಿ ಮಾಹಿತಿಯನ್ನು ಅಪೇಕ್ಷಿಸಿದ್ದು, ಸದರಿ ಮಾಹಿತಿಯನ್ನು ಸಿದ್ದಪಡಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು. ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಒಟ್ಟು 82 ಚಿತ್ರಕಲಾ ಶಿಕ್ಷಕರ ಗ್ರೇಡ್–2 ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಮಿತವ್ಯಯ ಸಡಿಲಗೊಂಡ ನಂತರ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.
ಇ	ಮಕ್ಕಳಲ್ಲಿ ಚಿತ್ರಕಲೆಯನ್ನು ಉತ್ತೇಜಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಮಕ್ಕಳ ದಿನನಿತ್ಯದ ಅನುಭವಗಳನ್ನು ಅಭಿವ್ಯಕ್ತಿಗೊಳಿಸಲು ಚಿತ್ರಕಲೆಯನ್ನು ಮಾಧ್ಯಮವಾಗಿ ಬಳಸುವಂತೆ ಪ್ರೋತ್ಸಾಹಿಸಲು ಕಲಾ ಸಂಯೋಜಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪ್ರಯತ್ನದಲ್ಲಿ ಚಿತ್ರಕಲಾ ಶಿಕ್ಷಕರಲ್ಲದೇ ಇತರೆ ವಿಷಯ ಶಿಕ್ಷಕರಿಗೂ ಎಲ್ಲಾ ವಿಷಯಗಳಲ್ಲಿ ಕಲೆಯನ್ನು ಅಂತರ್ಗತವಾಗಿ ಬೋಧಿಸಲು ಕಲಾ ಅಂತರ್ಗತ ಬೋಧನೆಯ ಕುರಿತು ತರಬೇತಿಗಳನ್ನು ನಡೆಸಲಾಗುತ್ತಿದೆ. ಈ ಪ್ರಯತ್ನದಲ್ಲಿ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಎನ್.ಸಿ.ಎಫ್–2005 ಆಧಾರಿತ ಪಠ್ಯವಸ್ತುವನ್ನು ಚಿತ್ರಕಲೆ ವಿಷಯದಲ್ಲಿ ತಯಾರಿಸಿದ್ದು ಅದನ್ನು ಎಲ್ಲಾ ಚಿತ್ರಕಲಾ ಶಿಕ್ಷಕರಿಗೆ ಲಭ್ಯವಾಗುವಂತೆ ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ನೂತನ ಪಠ್ಯವಸ್ತುವನ್ನು ಆಧರಿಸಿ ಚಿತ್ರ ಸಿಂಚನ ಮತ್ತು ಚಿತ್ರ ಸಿರಿ ಎಂಬ 2 ಕೈಪಿಡಿಗಳನ್ನು ತಯಾರಿಸಿ ಮುದ್ರಿಸಿ ಎಲ್ಲಾ ಶಿಕ್ಷಕರಿಗೆ ತಲುಪಿಸಲಾಗಿದೆ. ಕೈಪಿಡಿಗಳನ್ನು ಆಧರಿಸಿ 10 ದಿನಗಳ ತರಬೇತಿಯನ್ನು ಆರ್.ಎಮ್.ಎಸ್.ಎ.ಯಿಂದ ನೀಡಲಾಗಿದೆ

ಈ	ಚಿತ್ರಕಲೆ ಪಠ್ಯ ಪುಸ್ತಕ ಪ್ರತಿವರ್ಷ ಕಡ್ಡಾಯವಾಗಿ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆಯೇ; (ವಿವರ ನೀಡುವುದು)	NCF-2005 ಆಧಾರಿತ ಚಿತ್ರಕಲಾ ಪಠ್ಯಮಸ್ತಕ ರಚನಾ ಕಾರ್ಯ ಪ್ರಗತಿಯಲ್ಲಿದ್ದು, ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಚಿತ್ರಕಲಾ ಅಭ್ಯಾಸ ಸಹಿತ ಪುಸ್ತಕಗಳು ಹಾಗೂ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಚಿತ್ರಕಲಾ ಪಠ್ಯಮಸ್ತಕಗಳನ್ನು ಸಿದ್ಧಪಡಿಸಿ ಮುದ್ರಣಗೊಳಿಸಿ ವಿತರಿಸುವ ಕ್ರಮ ಕೈಗೊಳ್ಳಲಾಗುವುದು.
ಉ	ಎನ್.ಪಿ.ಎಸ್ ಬದಲಾಗಿ ಓ.ಪಿ.ಎಸ್ ಮೊದಲು ಹಳೆಯ ಪದ್ಧತಿಯನ್ನು ಜಾರಿಗೊಳಿಸುವುದು ಯಾವಾಗ;	ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಊ	ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಕಡ್ಡಾಯ ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)	ಪ್ರಶ್ನೆ 'ಆ' ನಲ್ಲಿ ಉತ್ತರಿಸಲಾಗಿದೆ.
ಋ	5 ರಿಂದ 10ನೇ ತರಗತಿಗಳ ಕಡ್ಡಾಯ ಪರೀಕ್ಷೆ ಹಾಗೂ ಮೌಲ್ಯಮಾಪನ (ಪ್ರಗತಿಪಥ) ದಲ್ಲಿ ನಮೂದಿಸಲು ಶಿಕ್ಷಕರಿಗೆ ನಿರ್ದೇಶನ ನೀಡಲಾಗಿದೆಯೇ? (ವಿವರ ನೀಡುವುದು)	ಹೌದು ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ

ಸಂಖ್ಯೆ: ಇಪಿ 81 ಎಲ್‌ಬಿಪಿ 2021

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ
ಸಚಿವರು